2) *How many sub-stations have started functioning? How many sub-stationare yet to start functioning?*

3) *When will Haladi substation start functioning?*

SRI. SHARANA BASAPPA DHARSHANAPUR (Ministry of state for energy) :

1) The No. of sub-stations sanctioned during the last 3 years in Dakshina Kannada and Udupi District is 11.

2) Among the above, work is under progress for 7sub-stations. For the balance of 4 Nos. of sub-stations, construction work is yet to be started.

3) The works of Haladi sub-station have been completed and the station is expected to start functioning by the end of May 1998.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರ ಕಾರ್ಮಿಕರ ನೇಮಕ.

1823 - ಶ್ರೀ. ಪಿ.ಎನ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು **ಈ** ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರ ನೇಮಕಾತಿಗಾಗಿ 1989-90ರಲ್ಲಿ ಕರೆದ ಅರ್ಜಿಗಳ ಸಂಖ್ಯೆ ಎಷ್ಟು?*

ಆ) *ಈ ಅರ್ಜಿಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?*

ಇ) *ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳುವ ಉದ್ದೇಶವಿದೆಯೇ?*

ಆನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 1200 ಪೌರ ಕಾರ್ಮಿಕರ ನೇಮಕಾತಿಗಾಗಿ 989-90ರಲ್ಲಿ ಕರೆದಿದ್ದು ಸ್ವೀಕರಿಸಿದ ಅರ್ಜಿಗಳ ಸಂಖ್ಯೆ 51,000.

ಆ) ಈ ಅರ್ಜಿಗಳನ್ನು ಕರೆದಾಗ, ಆಗಿನ ಸರ್ಕಾರದ ಮೀಸಲಾತಿ ಆದೇಶದಂತೆ ಜಾತಿ / ರ್ಗಗಳನ್ನು ಗುಂಪುವಾರು ಅಂದರೆ ಎ ಬಿ ಸಿ ಡಿ ಇ ಇಂದು ವಿಂಗಡಿಸಲಾಗಿತ್ತು. ಈ ಹುದ್ದೆಗಳನ್ನು ರ್ಕಾರವು ಲಾಟರಿ ಮುಖೇನ ತುಂಬಬೇಕೆಂದು ಆದೇಶಿಸಿತ್ತು. ಆದರೆ ಆಗಿನ ನಗರಸಭೆಯ ೀಮಕಾತಿಯ ಅಧಿಕಾರೇತರ ಸದಸ್ಯರು ಇದನ್ನು ವಿರೋಧಿಸಿದರು.

ಈಗ ಇತ್ತೀಚಿನ ಸರ್ಕಾರಿ ಮೀಸಲಾತಿ ಆದೇಶದಂತೆ ಈ ಜಾತಿಗಳನ್ನು ಪ್ರವರ್ಗವಾರು ಂದರೆ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಎಂದು ವಿಂಗಡಿಸಲಾಗಿದೆ. ಆದ್ದರಿಂದ ಈಗಿನ

ಸರ್ಕಾರಿ ಆದೇಶದಂತೆ 1990ರಲ್ಲಿ ಕರೆದ ಅರ್ಜಿಗಳನ್ನು ತುಂಬಬಹುದೇ ಎಂದು ಅಲ್ಪ ಸಂಖ್ಯಾತರ ಮತ್ತು ಹಿಂದುಳಿದ ವರ್ಗದ ಇಲಾಖೆಯವರಿಂದ ಮಾಹಿತಿ ಪಡೆಯಲು ಕ್ರಮ ಜರುಗಿಸಲಾಗಿದೆ.

ಇ) ಹೌದು.

ಬೆಂಗಳೂರಿನ ಕೃಷ್ಣ ರಾಜೇಂದ್ರ ಮಾರ್ಕೆಟ್ ಮಳಿಗೆ ಹಂಚಿಕೆ

1824 - ಶ್ರೀ. ಪಿ.ಎನ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣ ರಾಜೇಂದ್ರ ಮಾರ್ಕೆಟ್ ಮಳಿಗೆಗಳ ಹಂಚಿಕೆಯನ್ನು ಲಾಟರಿ ಮುಖಾಂತರ ಹಂಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಇದರಲ್ಲಿ ಅನೇಕ ತೊಂದರೆಗಳು ವರ್ತಕರಿಗೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಕೃಷ್ಣರಾಜೇಂದ್ರ ಮಾರ್ಕೆಟ್ ಮಳಿಗೆಗಳ ಹಂಚಿಕೆಯ ವಿಷಯದಲ್ಲಿ ಸ್ಕ್ರೀನಿಂಗ್ ಕಮಿಟಿಯಲಿ ಯಾರು ಯಾರು ಸದಸ್ಯರು ಇದ್ದಾರೆ?*

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಇಲ್ಲ.

ಇ) ಸ್ಕ್ರೀನಿಂಗ್ ಸಮಿತಿ ರಚಿಸಿದ್ದು ಈ ಸಮಿತಿಯು ಕೆಳಕಂಡವರನ್ನು ಒಳಗೊಂಡಿದೆ.

1) ಉಪ ಆಯುಕ್ತರು (ಅಭಿವೃದಿ)ರವರು ಸಮಿತಿಯ ಅಧ್ಯಕ್ಷರು.

2) ಉಪ ಆಯುಕ್ತರು (ಆಡಳಿತ)ರವರು ಮತ್ತು

3) ಕಾನೂನು ಸಲಹೆಗಾರರು ಸದಸ್ಯರು.

ಸಣ್ಣ ಕೈಗಾರಿಕೆಗಳಲ್ಲಿ ಎಲ್‌ಟಿಯಿಂದ ಹೆಚ್.ಟಿ.ಗೆ ಪರಿವರ್ತನೆ.

1829 - ಶ್ರೀ. ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸಣ್ಣ ಕೈಗಾರಿಕೆಗಳಲ್ಲಿ 67 ಹೆಚ್‌ಪಿ ಸ್ಯಾಂಕ್ಷನ್ ಲೋಡ್‌ಗಿಂತ ಹೆಚ್ಚು ಇದ್ದಲ್ಲಿ ಅದನ್ನು ಎಲ್.ಟಿ.ಯಿಂದ ಹೆಚ್.ಟಿ. ಪರಿವರ್ತನೆಗೆ ಸರ್ಕಾರ ಸುತ್ತೋಲೆ ಹೊರಡಿಸಿದೆಯೇ?*

ಆ) *ಯಾವಾಗ ಈ ಸುತ್ತೋಲೆ ಹೊರಡಿಸಲಾಗಿದೆ. ಹಾಗೂ ಎಂದಿನಿಂದ ಇದನ್ನು ಜಾರಿ ಮಾಡುವ ಉದ್ದೇಶವಿದೆ.*